ಭದ್ರ ಅಚ್ಚಕಟ್ಟು ಪ್ರದೇಶ ಕುರಿತು.

287- ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕಾಲುವೆಗಳ ನಿರ್ವಹಣೆಗಾಗಿ ಒಂದು ಕಿ.ಮೀ.ಗೆ ನಿಗದಿ ಮಾಡಲಾದ ಹಣವೆಷ್ಟು ಹಾಗೆ ನಿಗದಿ ಪಡಿಸಿವಲ್ಲಿ ಅದನ್ನು ಯಾವಾಗ ನಿಗದಿಪಡಿಸಲಾಯಿತು ?*

ಆ) *ನಿರ್ವಹಣೆ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡುವ ಹಿತದೃಷ್ಟಿಯಿಂದ ಈಗ ನಿಗದಿ ಮಾಡಲಾದ ನಿರ್ವಹಣಾ ವೆಚ್ಚವನ್ನು ಪರಿಷ್ಕರಣೆ ಮಾಡುವ ಪ್ರಸ್ತಾಪ ಇದೆಯೇ ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ನಿರ್ವಹಣೆಗೆ ಪ್ರತಿ ಹೆಕ್ಟೇರ್‌ಗೆ ರೂ. 140 ಎಂದು ನಿಗದಿ ಮಾಡಿದೆ. ಇದು 1985-86 ರಿಂದ ಜಾರಿಯಲ್ಲಿದೆ.

ಆ) ಇದೆ.

ಹರಿಹರ ತಾಲ್ಲೂಕಿನಲ್ಲಿ ಹೆಚ್ಚುವರಿ ಗ್ರಾಮಾಂತರ ಪೋಲೀಸ್ ಠಾಣೆ.

288 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹರಿಹರ ತಾಲ್ಲೂಕಿನಲ್ಲಿ ಒಂದು ಹೆಚ್ಚುವರಿ ಗ್ರಾಮಾಂತರ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಯಾವುದಾದರೂ ಪ್ರಸ್ತಾವನೆ ಸರ್ಕಾರದಲ್ಲಿದೆಯೇ?*

ಆ) *ಹಾಗಿದ್ದರೆ ಯಾವಾಗ ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರ ವರ್ತುಲ ರಸ್ತೆಯನ್ನು ಪೂರ್ಣಗೊಳಿಸುವುದು.

289 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರು ನಗರದ ವರ್ತುಲ ರಸ್ತೆ (ರಿಂಗ್ ರೋಡ್)ಯನ್ನು ಪೂರ್ಣಗೊಳಿಸಲು ಸರ್ಕಾರದವರು ಉದ್ದೇಶಿಸಿರುವರೇ?*

ಅ) ಹಾಗಿದ್ದಲ್ಲಿ ರಿಂಗ್ ರಸ್ತೆ, ಪೂರ್ಣಗೊಳಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಇ) ರಿಂಗ್ ರಸ್ತೆ ಕೆಲಸವನ್ನು ಖಾಸಗಿಯವರಿಗೆ ವಹಿಸಲಾಗುವುದೇ, ಈ ವಿಷಯದಲ್ಲಿ ತೆಗೆದು ಕೊಂಡ ಕ್ರಮಗಳೇನು ಹಾಗೂ ರಸ್ತೆ ಪೂರ್ಣಗೊಳಿಸಲು ಕಾಲಮಿತಿಯನ್ನು ಗೊತ್ತು ಪಡಿಸಲಾಗಿದೆಯೇ ?

ಶ್ರೀ. ಆರ್.ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) ಸರ್ಕಾರಿ ಆದೇಶ ಸಂಖ್ಯೆ ಹೆಚ್ಯುಡಿ 20 ಎಂಎನ್‌ಜೆ 95 ದಿನಾಂಕ: 4-5-95ರಲ್ಲಿ ಹೊರವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ "ನಿರ್ಮಿಸಿ - ಹಸ್ತಾಂತರಿಸುವ" ಕರಾರಿನ ಮೇಲೆ ವಹಿಸಿಕೊಡಲು ಸರ್ಕಾರದ ಒಪ್ಪಿಗೆಯನ್ನು ನೀಡಲಾಗಿದೆ.

ಇ) ಮೇಲೆ ಸೂಚಿಸಿರುವ ಸರ್ಕಾರಿ ಆದೇಶದ ರೀತ್ಯಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈಗಾಗಲೇ ಅರ್ಹರಾದಂಥ ಸಮಾಲೋಚಕರನ್ನು ವಿವರವಾದ ಯೋಜನಾ ವರದಿ ಮತ್ತು ಖಾಸಗಿ ಉದ್ದಿಮೆದಾರರ ಪೂರ್ವಾರ್ಹತೆಯ ಅರ್ಜಿಯನ್ನು ತಯಾರು ಮಾಡಲು ನೇಮಿಸಲಾಗಿದೆ. ಪೂರ್ವಾರ್ಹತೆಗಾಗಿ ಅರ್ಜಿಯನ್ನು ಸಲ್ಲಿಸಲು ಜನವರಿ 1996 ರಲ್ಲಿ ದೇಶಾದ್ಯಂತ ಪ್ರಸಾರವಾಗುವ ಪ್ರಸಿದ್ಧ ದಿನಪತ್ರಿಕೆಗಳಲ್ಲಿ ಅಧಿಸೂಚನೆಯನ್ನು ಕರೆಯಲಾಗಿದ್ದು, ಇದನ್ನು ಸ್ವೀಕರಿಸಿದ ನಂತರ ಪೂರ್ವಾರ್ಹತೆ ಹೊಂದಿದ ಅರ್ಜಿದಾರರಿಗೆ ಟೆಂಡರ್ ಪುಸ್ತಕಗಳನ್ನು ನೀಡಲಾಗುವುದು. ಪ್ರಸಕ್ತ ಅಂದಾಜಿನ ಆಧಾರದ ಮೇಲೆ ಈ ಕಾಮಗಾರಿಯು ಸೆಪ್ಟೆಂಬರ್-ಅಕ್ಟೋಬರ್ 1996ರಲ್ಲಿ ಪ್ರಾರಂಭಗೊಂಡು ಮೂರು ವರ್ಷಗಳ ನಂತರ ಮುಕ್ತಾಯಗೊಳ್ಳುವ ನಿರೀಕ್ಷೆಯಿದೆ.

ಭದ್ರಾ ಜಲಾಶಯ ಯೋಜನೆಯ ಸಿಬ್ಬಂದಿ ಸಂಖ್ಯೆ

290 - ಶ್ರೀ ಹೆಚ್.ಎಸ್. ಶಿವಪ್ಪ (ಹರಿಹರ) ಮಾನ್ಯ ಭಾರಿ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾ ಜಲಾಶಯದ ಯೋಜನೆಯಲ್ಲಿ (ಬಿ.ಆರ್. ಪ್ರಾಜೆಕ್ಟ್) ಕೆಲಸ ನಿರೀಕ್ಷಕರ ಹಾಗೂ ಸೌಡಿಗಳ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ, ಅವುಗಳ ಭರ್ತಿಪಡಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಭಾರಿ ನೀರಾವರಿ ರಾಜ್ಯ ಸಚಿವರು) :

ಅ) ಭದ್ರಾ ಜಲಾಶಯದ ಯೋಜನೆಯಡಿಯಲ್ಲಿನ ಕಾರ್ಯಾಲಯಗಳಿಗೆ ಕೆಲಸ ನಿರೀಕ್ಷಕರ ಹಾಗೂ ಸೌಡಿಗಳ ಮಂಜೂರಾತಿ ಹುದ್ದೆಗಳು ಇರುವುದಿಲ್ಲ. ಕಾರಣ ಖಾಲಿ ಹುದ್ದೆಗಳು ಇರುವುದಿಲ್ಲ.